


# ಅಮೆರಿಕದ ಬತ್ತಳಿಕೆಗೆ ಗೋಲ್ಡನ್ ಡೋಮ್

**ವಿಶ್ವದ ದೊಡ್ಡಣ್ಣ ಎಂದೇ ಕರೆಸಿಕೊಳ್ಳುವ ಅಮೆರಿಕ ತನ್ನ ರಕ್ಷಣೆಗೆ ನೂರಾರು ಬಿಲಿಯನ್ ವೆಚ್ಚದಲ್ಲಿ ಹೊಸ ರಕ್ಷಾ ಕವಚವೊಂದರ ಅಭಿವೃದ್ಧಿಗೆ ಮುಂದಾಗಿದೆ.**

**■ ಶಶಿಕುಮಾರ್ ಸಿ.**

ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರು, 175 ಬಿಲಿಯನ್ ವೆಚ್ಚದಲ್ಲಿ 'ಗೋಲ್ಡನ್ ಡೋಮ್ ಮಿಸ್ಸೈಲ್ ಶೀಲ್ಡ್' ಎಂಬ ರಕ್ಷಣಾ ವ್ಯವಸ್ಥೆಯನ್ನು ತಮ್ಮ ದೇಶ ಅಭಿವೃದ್ಧಿಪಡಿಸಲಿದೆ ಎಂದಿದ್ದಾರೆ.

ಪಹಲ್ಗಾಮ್ ಘಟನೆಗೆ ಉತ್ತರವಾಗಿ ಭಾರತೀಯ ಸೇನೆ ನಡೆಸಿದ 'ಆಪರೇಷನ್ ಸಿಂಧೂರ' ಕಾರ್ಯಾಚರಣೆಗೆ ಬೆಂಗಾವಲಾಗಿ ನಿಂತಿದ್ದು ರಷ್ಯಾ ನಿರ್ಮಿತ ಎಸ್–400 ಟ್ರಯಂಫ್ ಕ್ಷಿಪಣಿ ವಾಯು ರಕ್ಷಣಾ ವ್ಯವಸ್ಥೆ. ಇದು ಜಗತ್ತಿನಲ್ಲೇ ಅತ್ಯಾಧುನಿಕ ವಾಯು ರಕ್ಷಣಾ ವ್ಯವಸ್ಥೆಯಾಗಿದ್ದು, ಇದಕ್ಕಿಂತಲೂ ಹೆಚ್ಚು ಸಾಮರ್ಥ್ಯವನ್ನು 'ಗೋಲ್ಡನ್ ಡೋಮ್ ಮಿಸ್ಸೈಲ್ ಶೀಲ್ಡ್' ಹೊಂದಲಿದೆ.

## ಏನಿದು ಗೋಲ್ಡನ್ ಡೋಮ್?

ಅಮೆರಿಕದ ರಕ್ಷಣೆಗೆ ರೂಪಿಸುತ್ತಿರುವ ಅತ್ಯಾಧುನಿಕ ಯೋಜನೆಯೇ ಗೋಲ್ಡನ್ ಡೋಮ್ ಮಿಸ್ಸೈಲ್ ಶೀಲ್ಡ್. ಇದು ನೆಲ ಮತ್ತು ಬಾಹ್ಯಾಕಾಶದಿಂದ ಅಮೆರಿಕದ ವಾಯು ಪ್ರದೇಶದ ಮೇಲೆ ಹದ್ದಿನ ಕಣ್ಣಿಡುತ್ತದೆ. ಅಮೆರಿಕದತ್ತ ಬರುವ ಕ್ಷಿಪಣಿಗಳು ಮತ್ತು ಇತರ ವಾಯು ರಕ್ಷಣಾ ಬೆದರಿಕೆಗಳನ್ನು ಮುಂಚಿತವಾಗಿಯೇ ಪತ್ತೆ ಹಚ್ಚಿ, ಉಡಾವಣೆಯಾಗುವ ಮೊದಲೇ ಅವುಗಳನ್ನು ಹೊಡೆದುರುಳಿಸುವ ಸಾಮರ್ಥ್ಯ ಹೊಂದಲಿದೆ. ಇದು ಅಮೆರಿಕದ ವಾಯು ಪ್ರದೇಶವನ್ನು ಬ್ಯಾಲಿಸ್ಟಿಕ್ ಮತ್ತು ಕ್ರೂಸ್ ಕ್ಷಿಪಣಿ ದಾಳಿಯಿಂದ ರಕ್ಷಿಸುತ್ತದೆ ಎಂಬುದು ಗಮನಾರ್ಹ.

ಅಮೆರಿಕವು ಭೌಗೋಳಿಕವಾಗಿಯೂ ದೊಡ್ಡ ದೇಶ. ಎಲ್ಲ ದಿಕ್ಕುಗಳಿಂದಲೂ ತನಗೆ ಎದುರಾಗಬಹುದಾದ ವಾಯು ದಾಳಿಗೆ ತಡೆಯೊಡ್ಡುವುದು ಕಷ್ಟ. ಹೀಗಾಗಿಯೇ ತನ್ನ ವ್ಯಾಪ್ತಿಯ ವಾಯು ಪ್ರದೇಶ ರಕ್ಷಣೆಗೆ ಬಾಹ್ಯಾಕಾಶ ಮಟ್ಟದಲ್ಲೇ ರಕ್ಷಣಾ ವ್ಯವಸ್ಥೆಯನ್ನು ಅಳವಡಿಸಿಕೊಳ್ಳಲು ಇಂತಹದ್ದೊಂದು ಯೋಜನೆಗೆ ಡೊನಾಲ್ಡ್ ಟ್ರಂಪ್ ಕೈಹಾಕಿದ್ದಾರೆ. ಭವಿಷ್ಯದಲ್ಲಿ ಅಮೆರಿಕದ ಎಲ್ಲ ಪ್ರಮುಖ ನಗರಗಳು ಗೋಲ್ಡನ್ ಡೋಮ್ ನಿಗಾದಲ್ಲಿರಲಿವೆ. ಚೀನಾ, ರಷ್ಯಾ, ಇರಾನ್ ಮತ್ತು ಉತ್ತರ ಕೊರಿಯಾ ಸೇರಿದಂತೆ ಅಮೆರಿಕದ ವಿರೋಧಿ ದೇಶಗಳಿಂದ ಬರಬಹುದಾದ ಅತ್ಯಾಧುನಿಕ ತಂತ್ರಜ್ಞಾನ ಆಧರಿತ ಬೆದರಿಕೆಗಳಿಗೆ ತಡೆಯೊಡ್ಡುವ ಸಾಮರ್ಥ್ಯವನ್ನು ಗೋಲ್ಡನ್ ಡೋಮ್ ಹೊಂದಿದೆ.

ಇದು ಬೂಸ್ಟ್ ಫೇಸ್ (ಆರಂಭಿಕ ಹಂತ), ಮಿಡ್‌ಕೋರ್ಸ್ ಫೇಸ್ (ಗಗನದಲ್ಲಿ ಚಲನೆ) ಮತ್ತು ಟರ್ಮಿನಲ್ ಫೇಸ್ (ಗುರಿಯತ್ತ ಇಳಿಯುವಾಗ) ಸೇರಿದಂತೆ ಕ್ಷಿಪಣಿಗಳನ್ನು ವಿವಿಧ ಹಂತಗಳಲ್ಲಿ ತಡೆಗಟ್ಟುವ ಸಾಮರ್ಥ್ಯವನ್ನು ಹೊಂದಿದೆ. ತಾಂತ್ರಿಕವಾಗಿಯೂ ಬಲಿಷ್ಠವಾಗಿರುವ ಗೋಲ್ಡನ್ ಡೋಮ್ ಬಹು ಪದರದ ರಕ್ಷಣಾ ವ್ಯವಸ್ಥೆಯನ್ನು ಹೊಂದಿದೆ. ಇದು ಭೂಮಿ ಮತ್ತು ಬಾಹ್ಯಾಕಾಶದಲ್ಲಿ ತನ್ನ ರಕ್ಷಣಾ ಘಟಕಗಳನ್ನು ಒಳಗೊಂಡಿರಲಿದೆ.

ನೂರಾರು ಉಪಗ್ರಹಗಳ ಜಾಲವು ಕ್ಷಿಪಣಿಗಳನ್ನು ಪತ್ತೆಹಚ್ಚಲು ಮತ್ತು ಟ್ರ್ಯಾಕ್ ಮಾಡಲು ಸಹಾಯ ಮಾಡುವ ಗೋಲ್ಡನ್ ಡೋಮ್, ಬಾಹ್ಯಾಕಾಶದಲ್ಲಿಯೇ ಕ್ಷಿಪಣಿಗಳನ್ನು ತಡೆಗಟ್ಟಲು ಇಂಟರ್‌ಸೆಪ್ಟರ್ ಕ್ಷಿಪಣಿಗಳು ಅಥವಾ ಲೇಸರ್‌ಗಳನ್ನು ಬಳಸುತ್ತದೆ. ಜೊತೆಗೆ ಈ ವ್ಯವಸ್ಥೆಯಲ್ಲಿ ಬಳಸುವ ಕೃತಕ ಬುದ್ಧಿಮತ್ತೆ ಆಧರಿತ ಕಮಾಂಡ್ ಸಿಸ್ಟಮ್‌ಗಳು ರಿಯಲ್ ಟೈಮ್ ಡೇಟಾವನ್ನು ಬಳಸಿಕೊಂಡು ಕ್ಷಿಪ್ರವಾಗಿ ನಿರ್ಧಾರಗಳನ್ನು ತೆಗೆದುಕೊಳ್ಳುತ್ತವೆ.

## ಐರನ್ ಡೋಮ್‌ನಿಂದ ಸ್ಫೂರ್ತಿ

ಇಸ್ರೇಲ್–ಹಮಾಸ್ ಯುದ್ಧದ ವೇಳೆ ಐರನ್ ಡೋಮ್ ಹೆಸರು ಹೆಚ್ಚು ಪ್ರಚಲಿತದಲ್ಲಿತ್ತು. ಹಮಾಸ್ ಬಂಡುಕೋರರು ಇಸ್ರೇಲ್ ಮೇಲೆ ಹಾರಿಸಿದ ಸಾವಿರಾರು ಕ್ಷಿಪಣಿಗಳು, ರಾಕೆಟ್‌ಗಳು ಹಾಗೂ ಡ್ರೋನ್‌ಗಳನ್ನು ಇಸ್ರೇಲ್‌ನ 'ಐರನ್ ಡೋಮ್ ಮಿಸ್ಸೈಲ್ ಶೀಲ್ಡ್' ಪತ್ತೆಹಚ್ಚಿ ಆಗಸದಲ್ಲೇ ಹೊಡೆದುರುಳಿಸಿತ್ತು. ಗೋಲ್ಡನ್ ಡೋಮ್ ಸಹ ಇಸ್ರೇಲ್‌ನ ಸಾವಿರಾರು ಜನರನ್ನು ರಕ್ಷಿಸಿದ ಅತ್ಯಾಧುನಿಕ ವ್ಯವಸ್ಥೆಯಾದ ಐರನ್ ಡೋಮ್‌ನಿಂದ ಸ್ಫೂರ್ತಿಗೊಂಡಿದೆ.

ಅಮೆರಿಕ ತನ್ನ ಬದಲಾಗುತ್ತಿರುವ ಯುದ್ಧ ತಂತ್ರಗಳಿಗೆ ಸರಿಹೊಂದುವಂತೆ ಇಂಥದ್ದೊಂದು ಅತ್ಯಾಧುನಿಕ ವಾಯು ರಕ್ಷಣಾ ವ್ಯವಸ್ಥೆಯನ್ನು ರೂಪಿಸಲು ಅಡಿ ಇಟ್ಟಿದೆ. ಇದರ ಭಾಗವಾಗಿ, ಇದೇ ಮೊದಲ ಬಾರಿಗೆ ಬಾಹ್ಯಾಕಾಶದಲ್ಲೂ ರಕ್ಷಣಾ ವ್ಯವಸ್ಥೆಯನ್ನು ನಿಯೋಜಿಸಲು ಟ್ರಂಪ್ ಈಗಾಗಲೇ ಆದೇಶ ನೀಡಿದ್ದಾರೆ.

## ಬಾಹ್ಯಾಕಾಶ ಯುದ್ಧ ವಲಯವಲ್ಲ

ಗೋಲ್ಡನ್ ಡೋಮ್ ಮಿಸ್ಸೈಲ್ ಡಿಫೆನ್ಸ್ ಶೀಲ್ಡ್ ಯೋಜನೆಗೆ ಚೀನಾ ಮತ್ತು ರಷ್ಯಾ ಈಗಾಗಲೇ ಆಕ್ಷೇಪ ವ್ಯಕ್ತಪಡಿಸಿವೆ. ಈ ಯೋಜನೆಯನ್ನು ಬಲವಾಗಿ ವಿರೋಧಿಸಿರುವ ಆ ದೇಶಗಳು, ಅಮೆರಿಕದ ಯೋಜನೆಯು ಜಗತ್ತಿನಲ್ಲಿ ತೀವ್ರ ಅಸ್ಥಿರತೆ ಸೃಷ್ಟಿಸುತ್ತದೆ ಎಂದಿವೆ. ಅಲ್ಲದೇ ಈ ಯೋಜನೆಯು ಬಾಹ್ಯಾಕಾಶವನ್ನು ಯುದ್ಧ ವಲಯವನ್ನಾಗಿ ಪರಿವರ್ತಿಸುತ್ತದೆ, ಬಾಹ್ಯಾಕಾಶ ಯುದ್ಧ ವಲಯವಲ್ಲ ಎಂದೂ ಹೇಳಿವೆ.

ಅಮೆರಿಕದ ಸರ್ಕಾರ ಈ ಯೋಜನೆಗೆ ಈಗಾಗಲೇ 25 ಬಿಲಿಯನ್ ಡಾಲರ್ ಹಂಚಿಕೆ ಮಾಡಿದ್ದು, ಒಟ್ಟಾರೆಯಾಗಿ ಅಂದಾಜು 175 ಬಿಲಿಯನ್ ಡಾಲರ್ ಖರ್ಚಾಗಲಿದೆ ಎಂದಿದ್ದಾರೆ ಟ್ರಂಪ್. ಆದಾಗ್ಯೂ ಈ ವ್ಯವಸ್ಥೆಯು ಹಲವು ಸಂಕೀರ್ಣತೆಗಳಿಂದ ಕೂಡಿದ್ದು, ಅಂತಿಮವಾಗಿ ಅಭಿವೃದ್ಧಿಪಡಿಸಲು ಸುಮಾರು 500 ಬಿಲಿಯನ್ ಡಾಲರ್ ತಲುಪಬಹುದು ಎಂದು ಅಮೆರಿಕ ಕಾಂಗ್ರೆಸ್ ಬಜೆಟ್ ಕಚೇರಿ ಅಂದಾಜಿಸಿದೆ. ಮುಂದಿನ ಮೂರು ವರ್ಷಗಳಲ್ಲಿ ಇದನ್ನು ಅನುಷ್ಠಾನಕ್ಕೆ ತರಬೇಕೆಂದು ಟ್ರಂಪ್ ಈಗಾಗಲೇ ಸೂಚಿಸಿದ್ದಾರೆ. ಈ ಯೋಜನೆಗೆ ಸೇರಲು ಕೆನಡಾ ಆಸಕ್ತಿ ವ್ಯಕ್ತಪಡಿಸಿದೆ ಎಂದು ಅವರು ಹೇಳಿದ್ದಾರೆ.

ಗೋಲ್ಡನ್ ಡೋಮ್ ಯೋಜನೆಯ ಮೇಲ್ವಿಚಾರಣೆಗೆ ಅಮೆರಿಕ ಬಾಹ್ಯಾಕಾಶ ಪಡೆಯ ಜನರಲ್ ಮೈಕೆಲ್ ಗಟ್ಲಿನ್ ಅವರನ್ನು ನೇಮಿಸಲಾಗಿದೆ. ಅವರಿಗೆ ವಾಯುಪಡೆಯಲ್ಲಿ 30 ವರ್ಷಗಳಷ್ಟು ಅನುಭವವಿದೆ. ■